# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ | : | **260** |
| ಸದಸ್ಯರ ಹೆಸರು | : | ಶ್ರೀ ಕುಶಾಲಪ್ಪ ಎಂ.ಪಿ (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 14-09-2022 |
| ಉತ್ತರಿಸುವ ಸಚಿವರು | : | ಮಾನ್ಯ ಕಂದಾಯ ಸಚಿವರು |

**ಪ್ರಶ್ನೆ** | **ಉತ್ತರ**

**(ಅ)** ಕೊಡಗು ಜಿಲ್ಲೆಯಲ್ಲಿ ಪ್ರಕೃತಿ ವಿಕೋಪದಿಂದಾಗಿ ಆದಂತಹ ಹಾನಿ ಪ್ರಮಾಣ ಎಷ್ಟು; ಯಾವ ಯಾವ ಪ್ರದೇಶಗಳಲ್ಲಿ ಅತೀ ಹೆಚ್ಚು ಮಳೆಯಾಗಿ ಬೆಳೆಗಳು ನಾಶವಾಗಿವೆ; ಬೆಳೆಗಳ ಹಾನಿಯಿಂದಾಗಿ ರೈತರಿಗೆ ಆದಂತಹ ನಷ್ಟ ಎಷ್ಟು; ನಷ್ಟ ಅನುಭವಿಸಿದ ರೈತರಿಗೆ ಪರಿಹಾರ ಧನ ನೀಡಲಾಗಿದೆಯೇ; ನೀಡಿದ ಪರಿಹಾರ ಧನ ಎಷ್ಟು;

**ಉತ್ತರ:** 2022-23 ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಈವರೆಗೆ ಒಟ್ಟು 86.91 ಹೆಕ್ಟೇರ್ ಕೃಷಿ ಬೆಳೆಗಳು (79.91 ಹೆಕ್ಟೇರ್ ಭತ್ತ ಹಾಗೂ 7 ಹೆಕ್ಟೇರ್ ಜೋಳ) ಹಾಗೂ ತೋಟಗಾರಿಕಾ ಬೆಳೆಗಳ ನಷ್ಟದ ಪ್ರಮಾಣ 26.2 ಹೆಕ್ಟೇರ್ ಇರುತ್ತದೆ. ಸೋಮವಾರಪೇಟೆ ತಾಲ್ಲೂಕಿನಲ್ಲಿ ಹೆಚ್ಚು ಬೆಳೆ ಹಾನಿ ವರದಿಯಾಗಿದ್ದು, 45.11 ಹೆಕ್ಟೇರ್ ಹಾನಿ ಸಂಭವಿಸಿರುತ್ತದೆ. ಪೊನ್ನಂಪೇಟೆ ತಾಲ್ಲೂಕಿನಲ್ಲಿ 30 ಹೆಕ್ಟೇರ್, ವಿರಾಜಪೇಟೆ ತಾಲ್ಲೂಕಿನಲ್ಲಿ 29 ಹೆಕ್ಟೇರ್, ಮಡಿಕೇರಿ ತಾಲ್ಲೂಕಿನಲ್ಲಿ 15 ಹೆಕ್ಟೇರ್, ಕುಶಾಲನಗರ ತಾಲ್ಲೂಕಿನಲ್ಲಿ 4 ಹೆಕ್ಟೇರ್ ಬೆಳೆ ಹಾನಿ ವರದಿಯಾಗಿರುತ್ತದೆ. ಒಟ್ಟು ರೂ.106.148 ಲಕ್ಷಗಳಷ್ಟು ನಷ್ಟ ಸಂಭವಿಸಿರುತ್ತದೆ.

ಬೆಳೆ ಹಾನಿಗೆ ಸಂಬಂಧಿಸಿದಂತೆ ಪರಿಹಾರ ತಂತ್ರಾಂಶದಲ್ಲಿ ರೈತರ ಹಾನಿಯ ವಿವರವನ್ನು ನಮೂದಿಸಲಾಗುತ್ತಿದ್ದು, ನೇರವಾಗಿ ರೈತರ ಖಾತೆಗೆ ಪರಿಹಾರ ಹಣ ಜಮ ಮಾಡಲಾಗುತ್ತಿದೆ.

**(ಆ)** ಪ್ರಕೃತಿ ವಿಕೋಪದಿಂದಾಗಿ ಹಾನಿಗೊಳಗಾದ ಮನೆಗಳೆಷ್ಟು; ಯಾವ ಯಾವ ಪ್ರದೇಶಗಳಲ್ಲಿ ಎಷ್ಟು ಪ್ರಮಾಣದಲ್ಲಿ ಮನೆಗಳ ಹಾನಿಯಾಗಿವೆ; (ಜಿಲ್ಲೆಯಲ್ಲಿನ ಸಂಪೂರ್ಣ ವಿವರ ನೀಡುವುದು)

**ಉತ್ತರ:** ಜಿಲ್ಲೆಯಲ್ಲಿ 2022-23 ನೇ ಸಾಲಿನಲ್ಲಿ 486 ಮನೆಹಾನಿ ಪ್ರಕರಣಗಳು ವರದಿಯಾಗಿರುತ್ತದೆ.

| ಕ್ರ. ಸಂಖ್ಯೆ | ತಾಲ್ಲೂಕು | ಮನೆ ಹಾನಿ | | | |
|---|---|---|---|---|---|
| | | ಪೂರ್ಣ ಹಾನಿ | ತೀವ್ರ ಹಾನಿ | ಭಾಗಶಃ ಹಾನಿ | ಒಟ್ಟು ಮನೆ ಹಾನಿ |
| 1 | ಮಡಿಕೇರಿ | 10 | 20 | 67 | 97 |
| 2 | ಸೋಮವಾರ ಪೇಟೆ | 2 | 49 | 124 | 175 |
| 3 | ಕುಶಾಲನಗರ | 1 | 20 | 74 | 95 |
| 4 | ವಿರಾಜಪೇಟೆ | 2 | 12 | 49 | 63 |
| 5 | ಪೊನ್ನಂಪೇಟೆ | 7 | 14 | 35 | 56 |
| | **ಒಟ್ಟು** | 22 | 115 | 349 | 486 |

**(ಇ)** ಪ್ರಕೃತಿ ವಿಕೋಪದಿಂದಾಗಿ ಮನೆಗಳನ್ನು ಕಳೆದುಕೊಂಡ ಸಂತ್ರಸ್ತರಿಗೆ ಸರ್ಕಾರದಿಂದ ಪರಿಹಾರ ನೀಡಲಾಗಿದೆಯೇ; ಇಲ್ಲದಿದ್ದಲ್ಲಿ ಯಾವ ಕಾರಣಕ್ಕೆ ನೀಡಲಾಗಿಲ್ಲ. ಯಾವ ಕಾಲಮಿತಿಯ ಒಳಗೆ ಸಂತ್ರಸ್ತರ ನೆರವಿಗೆ ಸರ್ಕಾರ ಧಾವಿಸುವುದು? (ಸಂಪೂರ್ಣ ವಿವರ ಒದಗಿಸುವುದು)

**ಉತ್ತರ:** ಪ್ರಕೃತಿ ವಿಕೋಪದಿಂದಾಗಿ ಮನೆಗಳನ್ನು ಕಳೆದುಕೊಂಡ ಸಂತ್ರಸ್ತರಿಗೆ ಸರ್ಕಾರದ ಆದೇಶ ಸಂಖ್ಯೆ :ಕಂಇ 275 ಟಿ ಎನ್ ಆರ್ 2022 ದಿ:12.07.2022ರನ್ವಯ ಈ ಕೆಳಕಂಡಂತೆ ಮಂಜೂರು ಮಾಡಿದೆ.

| ಕ್ರ. ಸಂ | ಹಾನಿಯ ವರ್ಗ | SDRF/ NDRF ದರ | ರಾಜ್ಯ ಸರ್ಕಾರದ ಪರಿಷ್ಕೃತ ದರ | ಒಟ್ಟು |
|---|---|---|---|---|
| 1 | ಎ ವರ್ಗ (ಸಂಪೂರ್ಣ ಹಾನಿ (ಶೇ 75 ಕ್ಕಿಂತ ಹೆಚ್ಚು | 95,100/- | 4,404,900 | 5,00,000/- |
| 2 | B2 ವರ್ಗ (ಪುನರ್ ನಿರ್ಮಾಣ ಶೇ.25 ರಿಂದ ಶೇ.75 | 95,100/- | 404900/- | 5,00,000/- |
| 3 | B1 ವರ್ಗ ತೀರ್ವ ಹಾನಿ ದುರಸ್ಥಿ (ಶೇ.25 ರಿಂದ ಶೇ.75 | 95,100/- | 204900/- | 3,00,000/- |
| 4 | C ವರ್ಗ ಭಾಗಶ: ಮನೆ ಹಾನಿ ಶೇ.15 ರಿಂದ ಶೇ.25) | 5,200/- | 44,800/- | 50,000/- |

ಸಂತ್ರಸ್ಥರ ವಿವರಗಳನ್ನು RGRHCL ತಂತ್ರಾಂಶದಲ್ಲಿ ದಾಖಲಿಸಿ ಮನೆ ನಿರ್ಮಾಣದ ಪ್ರಗತಿಗನುಸಾರವಾಗಿ ಹಂತವಾರು ಪರಿಹಾರವನ್ನು ಬಿಡುಗಡೆ ಮಾಡಲಾಗುತ್ತದೆ.

*ಕಂಇ 360 ಟಿಎನ್‌ಆರ್ 2022*

**(ಆರ್.ಅಶೋಕ)**
ಕಂದಾಯ ಸಚಿವರು